ಇಂದು ದಿಃ**23-07-2025** ರಂದು ಮುಕ್ತ ನ್ಯಾಯಾಲಯದಲ್ಲಿ ಹಾಜರಿದ್ದ ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲುಃ ಶ್ರೀ ಎಸ್.ಎನ್.ಪಿ ವಕೀಲರಿಂದ ಪ್ರತಿವಾದಿಯ ಪರಃ**

ನಾನು ಹಾಜರುಪಡಿಸಿದ ವಂಶವೃಕ್ಷ ನಿ.ಪಿ-1 ರಲ್ಲಿ ನನ್ನ ಹೆಸರು ಇಲ್ಲ ಎಂದರೆ ಸರಿ. ಸಾಕ್ಷಿ ನನ್ನ ತಾಯಿಯ ಹೆಸರು ಇದೆ ಎಂದು ಹೇಳುತ್ತಾರೆ. 1 ನೇ ವಾದಿ ನನ್ನ ತಾಯಿ. 2 ನೇ ವಾದಿ ನನ್ನ ಚಿಕ್ಕಮ್ಮ. 4 ನೇ ವಾದಿ ಈತ 2 ನೇ ವಾದಿಯ ಮಗ. ಆತನ ಹೆಸರು ಸಹ ನಿ.ಪಿ-1 ರಲ್ಲಿ ಇಲ್ಲ ಎಂದರೆ ಸರಿ. ನನ್ನ ತಾಯಿಗೆ ನಾವು 4 ಜನ ಮಕ್ಕಳು. ಅವರೆಂದರೆ ನಾನು, ನಾಗರಾಜ, ಮಂಜುಳಾ ಮತ್ತು ಅನುಸೂಯ ಎಂದು ಇರುತ್ತದೆ. ಸದರಿಯವರನ್ನು ಈ ದಾವೆಯಲ್ಲಿ ಪಕ್ಷಗಾರ ಎಂದು ಮಾಡಿಲ್ಲ. 2 ನೇ ವಾದಿಗೆ ಇಬ್ಬರು ಜನ ಮಕ್ಕಳು. ಅವರೆಂದರೆ 4 ನೇ ವಾದಿ. ಆತನಿಗೆ ಅಕ್ಕ-ತಂಗೀಯರು ಇಲ್ಲ. ಈ ದಾವೆಯನ್ನು ಪಾಲುವಿಭಾಗ ಕೇಳಿ ಮಾಡಿದ್ದೇನೆ. ನಿ.ಪಿ-1 ರಲ್ಲಿ 1 ನೇ ಪ್ರತಿವಾದಿಯ ಹೆಸರು ಇಲ್ಲ ಎಂದರೆ ಸರಿ. ಸಾಕ್ಷಿ ಅವರು ದತ್ತುಪುತ್ರ ಎಂದು ಹೇಳುತ್ತಾರೆ. ಹನಮಂತಪ್ಪಗೌಡ ಈತ 1 ನೇ ಪ್ರತಿವಾದಿಯನ್ನು ದತ್ತು ತೆಗೆದುಕೊಂಡಿದ್ದರು. ನಿ.ಪಿ-1 ರಲ್ಲಿ 1 ನೇ ಪ್ರತಿವಾದಿಯನ್ನು ದತ್ತು ಮಗ ಎಂದು ಸಹ ತೋರಿಸಿಲ್ಲ ಎಂದರೆ ಸರಿ.

ನಾನು 1964 ರಲ್ಲಿ ಹುಟ್ಟಿರುತ್ತೇನೆ. ನಾನು ಹಾಜರುಪಡಿಸಿದ ನಿ.ಪಿ-12 ರ ಪ್ರಕಾರ 1 ನೇ ಪ್ರತಿವಾದಿಯನ್ನು ನನ್ನ ಅಜ್ಜ 1961 ರಲ್ಲಿ ನಾನು ಹುಟ್ಟುವ ಮೊದಲೇ ದತ್ತು ತೆಗೆದುಕೊಂಡಿರುತ್ತಾರೆ ಎಂದರೆ ಸರಿ. ಸಾಕ್ಷಿ ಕಾನೂನು ಬಾಹಿರವಾಗಿ ತೆಗೆದುಕೊಂಡಿರುತ್ತಾರೆ ಎಂದು ಹೇಳುತ್ತಾರೆ. ನನ್ನ ಅಜ್ಜಿಗೆ ಗೊತ್ತಾಗದ ಹಾಗೇ ದತ್ತು ಪತ್ರ ಮಾಡಿಸಿಕೊಂಡಿರುತ್ತಾರೆ ಎಂದು ಸಾಕ್ಷಿ ಹೇಳುತ್ತಾರೆ.

ದಿನಾಂಕಃ23-12-1974 ರಂದು ಹನುಮಂತಗೌಡ ಮತ್ತು 1 ನೇ ಪ್ರತಿವಾದಿಯ ನಡುವೆ ನೊಂದಾಯಿತ ಪಾಲುವಿಭಾಗ ಪತ್ರ ಆಗಿದೆ ಎಂದರೆ ಸರಿಯಲ್ಲ. ಸಾಕ್ಷಿ ಹೆಣ್ಣು

ಮಕ್ಕಳ ಅನುಮತಿ ಇಲ್ಲದೇ ಮಾಡಿಕೊಂಡಿರುತ್ತಾರೆ ಎಂದು ಹೇಳುತ್ತಾರೆ. ಸದರಿ ವಿಭಾಗಪತ್ರದ ನಂತರ 1ನೇ ಪ್ರತಿವಾದಿಯ ಹಿಸ್ಸೆಗೆ ಬಂದ ಆಸ್ತಿಗಳಲ್ಲಿ ಪಾಲುವಿಭಾಗ ಕೇಳಲು, ವಾದಿಯರಿಗೆ ಮತ್ತು ಉಳಿದ ಪ್ರತಿವಾದಿಯರಿಗೆ ಯಾವುದೇ ಹಕ್ಕು ಇಲ್ಲ ಎಂದರೆ ಸರಿಯಲ್ಲ.

ದಿನಾಂಕ:19-07-2001 ರಂದು 1ನೇ ಪ್ರತಿವಾದಿ ಸರ್ವೆ ನಂಬರ್ 39ರಲ್ಲಿ ಇಂದ್ರಮ್ಮ ಮತ್ತು ತುಂಗಮ್ಮ ಎನ್ನುವವರಿಂದ ಒಟ್ಟು 6 ಎಕರೆ 18 ಗುಂಟೆಯ ಪೈಕಿ 1 ಎಕರೆ ಜಮೀನನ್ನು ಕ್ರಯಕ್ಕೆ ಪಡೆದಿದ್ದು, ಇದು ಅವರ ಸ್ವಯಾರ್ಜಿತ ಆಸ್ತಿ ಎಂದರೆ ಸರಿಯಲ್ಲ. ಸಾಕ್ಷಿ ನನ್ನ ಅಜ್ಜನ ಆದಾಯದಿಂದ ಖರೀದಿ ಮಾಡಿದ್ದು ಎಂದು ಹೇಳುತ್ತಾರೆ. 1961ರ ದತ್ತು ಪತ್ರ, 1974ರ ಪಾಲುವಿಭಾಗ ಪತ್ರ ಮತ್ತು 2001ರ ಕ್ರಯಪತ್ರವನ್ನು ನಾವು ಈ ದಾವೆಯಲ್ಲಿ ಪ್ರಶ್ನೆ ಮಾಡಿಲ್ಲ ಎಂದರೆ ಸರಿಯಲ್ಲ. ನಾವು ಅವುಗಳನ್ನು ಪ್ರಶ್ನೆ ಮಾಡದೇ ಇದ್ದರೂ, ಪ್ರಶ್ನೆ ಮಾಡಿದ್ದೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 1974ರ ನೊಂದಾಯಿತ ವಿಭಾಗಪತ್ರ ಇದು ಈಗಾಗಲೇ ಅಂತಿಮವಾಗಿದ್ದು, ಇದನ್ನು ಈಗ ಪ್ರಶ್ನೆ ಮಾಡಲು ಆಗುವುದಿಲ್ಲ ಎಂದರೆ ಸರಿಯಲ್ಲ. ಸಾಕ್ಷಿ ಪಿತ್ರಾರ್ಜಿತ ಆಸ್ತಿಯಲ್ಲಿ ಹಿಸ್ಸೆ ಕೇಳಿದ್ದೇವೆ ಎಂದು ಹೇಳುತ್ತಾರೆ. 1974ರಲ್ಲಿ ವಿಭಾಗಪತ್ರ ಆದ ನಂತರ, 1ನೇ ಪ್ರತಿವಾದಿಯ ಹೆಸರಿಗೆ ಖಾತೆ ಬದಲಾವಣೆ ಕಂದಾಯ ದಾಖಲೆಗಳಲ್ಲಿ ಆಗಿವೆ ಎಂದರೆ ಸರಿ. ಸಾಕ್ಷಿ ಅವು ತಪ್ಪು, ಅವರೇ ಮಾಡಿಕೊಂಡಿದ್ದಾರೆ ಎಂದು ಹೇಳುತ್ತಾರೆ. ಈ ಕಂದಾಯ ದಾಖಲೆಗಳನ್ನು ನಾವು ಪ್ರಶ್ನಿಸಿಲ್ಲ ಎಂದರೆ ಸರಿ, ಸಾಕ್ಷಿ ಗೊತ್ತಾಗದ ಹಾಗೇ ಮಾಡಿಕೊಂಡಿದ್ದಾರೆ ಎಂದು ಹೇಳುತ್ತಾರೆ. 1ನೇ ಪ್ರತಿವಾದಿಗೆ ಹಿಸ್ಸೆಯಲ್ಲಿ ಬಂದಾಗಿನಿಂದ ಅವರೇ ದಾವಾ ಆಸ್ತಿಗಳ ಸ್ವಾಧೀನಾನುಭವದಲ್ಲಿ ಇದ್ದಾರೆ ಎಂದರೆ ಸರಿ. ಸಾಕ್ಷಿ ನಾವು ಪಾಲು ಕೇಳುತ್ತಾ ಬಂದೇವು, ಮುಂದೂಡತ್ತಾ ಬಂದರು ಎಂದು ಹೇಳುತ್ತಾರೆ. ಹಬ್ಬ ಹುಣ್ಣಿಮೆಗೆ ಹೋದಾಗ ಪಾಲು

ಕೊಡು ಎಂದು ಕೇಳಿದ್ದೇವು. ಯಾವ ದಿನಾಂಕದಂದು ಕೇಳಿದ್ದೇವು ಎಂದು ನಿರ್ಧಿಷ್ಟವಾಗಿ ಹೇಳಲು ಆಗುವುದಿಲ್ಲ. ದಾವಾ ಆಸ್ತಿಗಳಲ್ಲಿ ನನಗಾಗಲೀ, ಉಳಿದ ವಾದಿಯರಿಗಾಗಲೀ ಅಥವಾ ಉಳಿದ ಪ್ರತಿವಾದಿಯರಿಗಾಗಲೀ ಯಾವುದೇ ಹಿಸ್ಸೆ ಅಥವಾ ಹಕ್ಕು ಇಲ್ಲ ಎಂದರೆ ಸರಿಯಲ್ಲ. ಸುಳ್ಳು ದಾವೆ ದಾಖಲು ಮಾಡಿ, ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ, ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇರುವುದಿಲ್ಲ.**

(ತೆರೆದ ನ್ಯಾ. ದಲ್ಲಿ ಸಾಕ್ಷಿ ಹೇಳಿಕೆಯಂತೆ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಪಡಿಸಿದೆ).

ಓ ಹೇ ಕೇ ಸರಿ ಇದೆ.

ಸಹಿ/-
ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ, ಹರಿಹರ, ಸಂಚಾರಿ ನ್ಯಾಯಾಲಯ,
ಹೊನ್ನಾಳಿ.